**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>**

**<u>Spl.C. 143/2020</u>**

**P.W.-3**
**C.W.-3**

| | | |
|---|---|---|
| ಹೆಸರು | : | ನವೀದ್ ಪಾಷ |
| ತಂದೆಯ ಹೆಸರು | : | ಮಖಬೂಲ್ ಪಾಷ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಕಿರಿಯ ತರಬೇತಿ ಅಧಿಕಾರಿ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ , ಶ್ರೀರಂಗಪಟ್ಟಣ. |
| ವಾಸಸ್ಥಳ | : | ಮೈಸೂರು |

**ದಿನಾಂಕಃ 14.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

ನಾನು 2010 ರಿಂದ 2023 ರವರೆಗೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಮೈಸೂರು ನಲ್ಲಿ ಕಿರಿಯ ತರಬೇತಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿಃ 05.09.2018 ರಂದು ನನ್ನ ಮೇಲಾಧಿಕಾರಿಗಳು ನನ್ನನ್ನು ಮಧ್ಯಾಹ್ನ 12.00 ಗಂಟೆ ಸಮಯಕ್ಕೆ ಕರೆದು, ಎಸಿಬಿ ಕಛೇರಿಗೆ ಹೋಗಲು ತಿಳಿಸಿದರು. ಅದರಂತೆ ನಾನು ಮಧ್ಯಾಹ್ನ 12.15 ಕ್ಕೆ ಎಸಿಬಿ ಕಛೇರಿಗೆ ಹೋದೆ. ಅಲ್ಲಿ ಎಲ್ ಐ ಸಿ ವಿಭಾಗೀಯ ಕಛೇರಿಯಿಂದ ಎನ್. ಶ್ರೀಪತಿ ಎನ್ನುವವರು ಸಹ ಬಂದಿದ್ದರು. ನಾವಿಬ್ಬರು ಇನ್ಸ್ ಪೆಕ್ಟರ್ ಶೇಖರ್ ರವರ ಬಳಿಗೆ ಹೋಗಿ ವರದಿ ಮಾಡಿಕೊಂಡೆವು. ಇನ್ಸ್ ಪೆಕ್ಟರ್ ರವರು ನಮ್ಮಿಬ್ಬರಿಗೆ

ಅಲ್ಲಿ ಕುಳಿತಿದ್ದ ಒಬ್ಬ ಮಹಿಳೆಯನ್ನು ತೋರಿಸಿ ಈಕೆ ಶೀಲಾವತಿ , ಇವರು ದೂರನ್ನು ನೀಡಿದ್ದಾರೆ ಎಂದು ಪರಿಚಯಿಸಿದರು. ನಂತರ ಆ ದೂರಿನ ಪ್ರತಿಯನ್ನು ನಮ್ಮಿಬ್ಬರಿಗೆ ಓದಿಕೊಳ್ಳಲು ಕೊಟ್ಟರು. ನಾವು ಅದನ್ನು ಓದಿಕೊಂಡೆವು. ಆ ದೂರಿನಲ್ಲಿ , ಶೀಲಾವತಿಯವರು ಬೆಲವತ್ತ ಗ್ರಾಮದ ನಿವಾಸಿಯಾಗಿದ್ದು , ಅಲ್ಲಿ ಅಕೆಗೆ 15X55 ಅಡಿ ಅಳತೆಯ ನಿವೇಶನವಿದ್ದು , ಈ ಪೈಕಿ 15X 30 ಅಡಿ ನಿವೇಶನದಲ್ಲಿ ಮನೆ ನಿರ್ಮಿಸಿದ್ದು , ಉಳಿಕೆ ನಿವೇಶನ ಖಾಲಿ ಇದ್ದು , ಈ ಸ್ವತ್ತಿನ ಸಂಬಂಧ ಗ್ರಾಮ ಪಂಚಾಯತ್ ನಿಂದ ನಮೂನೆ 11ಬಿ ಯನ್ನು ನೀಡುವಂತೆ ಕೋರಿ ಆಕೆ ಸಿದ್ದಲಿಂಗಪುರ ಗ್ರಾಮ ಪಂಚಾಯ್ತಿಗೆ ಅರ್ಜಿಯನ್ನು ಸಲ್ಲಿಸಿದ್ದರು. ಸದರಿ ನಮೂನೆ 11 ಬಿ ಯನ್ನು ನೀಡಲು ಸದರಿ ಗ್ರಾಮ ಪಂಚಾಯ್ತಿಯ ಕಾರ್ಯದರ್ಶಿ ಮರಪ್ಪ ರೂ.15,000/- ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುತ್ತಾರೆ, ನಂತರ ರೂ.12,000/- ಲಂಚದ ಹಣ ವನ್ನು ಪಡೆಯಲು ಆತ ಒಪ್ಪಿರುತ್ತಾನೆ ಎಂದು ದೂರಿನಲ್ಲಿ ನಮೂದಾಗಿತ್ತು.

3. ನಂತರ ತನಿಖಾಧಿಕಾರಿಯವರು ಎನ್ ಶ್ರೀಪತಿ ಯವರನ್ನು ಪಂಚ ಸಾಕ್ಷಿ 1 ಎಂತಲು, ನನ್ನನ್ನು ಪಂಚ ಸಾಕ್ಷಿ 2 ಎಂತಲು ಹೆಸರಿಸಿದರು. ಅದಕ್ಕೆ ನಾವು ಒಪ್ಪಿದೆವು.

4. ದೂರುದಾರರಾದ ಶೀಲಾವತಿಯವರು ತನಿಖಾಧಿಕಾರಿಯವರ ಮುಂದೆ ರೂ.2000/- ಮುಖ ಬೆಲೆಯ 6 ನೋಟುಗಳನ್ನು ಹಾಜರುಪಡಿಸಿದರು. ಅದನ್ನು ತನಿಖಾಧಿಕಾರಿಯವರು ಚಾ,ಸಾ. 2 ರವರಿಗೆ ನೀಡಿದರು. ಅವರು ಆ ನೋಟುಗಳ ಮುಖ ಬೆಲೆ ಮತ್ತು ಕ್ರಮ ಸಂಖ್ಯೆಗಳನ್ನು ನೋಡಿ , ಓದಿ ಹೇಳಿದಂತೆ ನಾನು ಅದನ್ನು ಒಂದು ಪ್ರತ್ಯೇಕ ಬಿಳಿಯ ಹಾಳೆಯಲ್ಲಿ ಬರೆದುಕೊಂಡೆ. ಅದನ್ನು ಈಗ ನ್ಯಾಯಾಲಯದ ಮುಂದೆ

ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ದಾಖಲಾತಿಯನ್ನು ಈಗಾಗಲೇ ನಿಪಿ 21 ಎಂದು ಗುರುತುಪಡಿಸಿಕೊಳ್ಳಲಾಗಿದ್ದು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 21ಬಿ ಎಂದು ಗುರುತುಪಡಿಸಿಕೂಳ್ಳಲಾಯಿತು. ನಂತರ ಆ ದಾಖಲಾತಿಯನ್ನು ಚಾ,ಸಾ. 2 ರವರು ಇಟ್ಟುಕೊಂಡರು. ನಂತರ ಚಾ,ಸಾ. 2 ರವರು ಆ ಹಣವನ್ನು ಎಸಿಬಿ ಸಿಬ್ಬಂದಿಗೆ ನೀಡಿದ್ದು , ಅವರು ಆ ನೋಟುಗಳನ್ನು ಒಂದು ಪೇಪರ್ ಮೇಲೆ ಪ್ರತ್ಯೇಕವಾಗಿ ಹರಡಿ , ಎಲ್ಲಾ ನೋಟುಗಳಿಗೂ ಫಿನಾಪ್ತಲೀನ್ ಪೌಡರ್ ಲೇಪಿಸಿದರು. ನಂತರ ಆ ಫಿನಾಪ್ತಲೀನ್ ಲೇಪಿತ ನೋಟುಗಳನ್ನು ಚಾ.ಸಾ. 2 ರವರಿಗೆ ಪುನಃ ನೀಡಿ, ಅವರು ಸದರಿ ನೋಟುಗಳನ್ನು ದೂರುದಾರರ ಪರ್ಸಿನಲ್ಲಿ ಇಡಲು ಹೇಳಿದ್ದು , ಅದರಂತೆ ಚಾ,ಸಾ. 2 ರವರು ದೂರುದಾರರ ಪರ್ಸಿನಲ್ಲಿ ಇಟ್ಟರು. ಆ ಪರ್ಸಿನಲ್ಲಿ ಆ ಹಣವನ್ನು ಇಡುವ ಮೊದಲು, ಅದರಲ್ಲಿ ಬೇರೆ ಯಾವುದೇ ಹಣ ಇರುವುದಿಲ್ಲ ಎನ್ನುವುದನ್ನು ತನಿಖಾಧಿಕಾರಿಯವರು ಖಚಿತಪಡಿಸಿಕೊಂಡರು. ನಂತರ ತನಿಖಾಧಿಕಾರಿಯವರು, ದೂರುದಾರರಿಗೆ ಆರೋಪಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಾಗ ಮಾತ್ರವೇ ಅದನ್ನು ತೆಗೆದುಕೊಡಬೇಕು, ಅಲ್ಲಿಯವರೆಗೂ ಆ ಹಣವನ್ನು ಮುಟ್ಟಬಾರದು ಎಂದು ತಿಳಿಸಿದ್ದರು. ಅಲ್ಲಿ ಎಸಿಬಿ ಸಿಬ್ಬಂದಿಯವರು ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿಕೊಂಡರು ಮತ್ತು ಚಾ,ಸಾ. 2 ರವರ ಕೈ ಬೆರಳುಗಳನ್ನು ಆ ದ್ರಾವಣದಲ್ಲಿ ಅದ್ದಿಸಿದರು. ಆಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಪ್ರತ್ಯೇಕ ಗಾಜಿನ ಬಾಟಲಿನಲ್ಲಿ ಶೇಖರಿಸಿ , ಮುಚ್ಚಿ, ಬಟ್ಟೆಯಿಂದ ಕಟ್ಟಿ ಸೀಲನ್ನು ಹಾಕಿದರು. ಈಗ ಅದನ್ನು ನೋಡುತ್ತಿದ್ದೇನೆ. ಅದರ ಮೇಲಿರುವ ಚೀಟಿಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಗುಲಾಬಿ ಬಣ್ಣದ ದ್ರಾವಣವಿರುವ ಬಾಟಲನ್ನು

ಈಗಾಗಲೇ ಎಂ ಒ 1 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಹಾಳೆಯ ಮೇಲೆ ಉಳಿದಿದ್ದ ಫಿನಾಪ್ತಲೀನ್ ಪೌಡರನ್ನು ಪ್ರತ್ಯೇಕವಾಗಿ ಶೇಖರಿಸಿದರು. ಅದನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದರ ಪ್ಯಾಕೆಟ್ ಮೇಲೆ ಇರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ಈಗಾಗಲೇ ಎಂ ಒ 2 ಎಂದು ಗುರುತುಪಡಿಸಿಕೊಳ್ಳಲಾಗಿದೆ.

5. ನಂತರ ದೂರುದಾರಳು ತನ್ನ ಮೊಬೈಲ್ ನ ಮೆಮೋರಿ ಕಾರ್ಡ ಚಿಪ್ಪನ್ನು ತನಿಖಾಧಿಕಾರಿಯವರಿಗೆ ನೀಡಿದರು. ಎಸಿಬಿ ಸಿಬ್ಬಂದಿ ಆ ಕಾರ್ಡನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ಅದರಲ್ಲಿದ್ದ ಸಂಭಾಷಣೆಯನ್ನು ನಮಗೆ ಕೇಳಿಸಿದರು. ನಂತರ ಆ ಸಂಭಾಷಣೆಯನ್ನು ಎರಡು ಸಿಡಿಗಳಿಗೆ ವರ್ಗಾಯಿಸಿಕೊಂಡರು ಮತ್ತು ಆ ಮೆಮೋರಿ ಕಾರ್ಡನ್ನು ಅಮಾನತ್ತು ಪಡಿಸಿಕೊಂಡರು. ಸದರಿ ಮೆಮೋರಿ ಕಾರ್ಡ ಚಿಪ್ಪನ್ನು ಈಗ ನೋಡುತ್ತಿದ್ದೇನೆ. ಅದರ ಪ್ಯಾಕೆಟ್ ಮೇಲೆ ಇರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ಈಗಾಗಲೇ ಎಂ ಒ 3 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಆ ಸಂಭಾಷಣೆಯನ್ನು ಅಲ್ಲಿ ಮಾಡಿದ ಪ್ರಾಯೋಗಿಕ ಪಂಚನಾಮೆಯಲ್ಲಿ ಟೈಪ್ ಮಾಡಿಕೊಂಡರು. ಮೇಲ್ಕಂಡ ಪ್ರಕ್ರಿಯಗಳು ನಡೆಯುತ್ತಿದ್ದ ಕಾಲಕ್ಕೆ ಪೋಟೋಗಳನ್ನು ತೆಗೆಯುತ್ತಿದ್ದರು. ಸದರಿ ಪೋಟೋಗಳನ್ನು ಈಗ ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ನಿಪಿ 3 ರಿಂದ 9 ಎಂದು ಗುರುತುಪಡಿಸಿಕೊಳ್ಳಲಾಗಿದೆ.

6. ತನಿಖಾಧಿಕಾರಿಯವರು ನನಗೆ ಫಿರ್ಯಾದುದಾರರೊಂದಿಗೆ ಜೊತೆಯಲ್ಲಿಯೇ ಹೋಗಿ ಫಿರ್ಯಾದುದಾರರು ಮತ್ತು ಆರೋಪಿಯ ನಡುವೆ ನಡೆಯುವ ಸಂಭಾಷಣೆ ಕೇಳಿಸಿಕೊಳ್ಳಬೇಕು ಮತ್ತು ಏನು ನಡೆಯುತ್ತದೆ ಎನ್ನುವುದನ್ನು

ಗಮನಿಸಬೇಕು ಹಾಗೂ ಫಿರ್ಯಾದುದಾರರಿಂದ ಪಡೆದ ಲಂಚದ ಹಣವನ್ನು ಆರೋಪಿ ಎಲ್ಲಿ ಇಟ್ಟುಕೊಳ್ಳುತ್ತಾನೆ ಎನ್ನುವುದನ್ನು ಗಮನಿಸಬೇಕು ಎಂದು ತಿಳಿಸಿದ್ದರು. ಲಂಚದ ಹಣವನ್ನು ಆರೋಪಿಗೆ ಕೊಟ್ಟ ನಂತರ , ದೂರುದಾರಳು ಕಛೇರಿಯಿಂದ ಹೊರ ಬಂದು ತನ್ನ ಸೆರಗಿನಿಂದ ಮುಖವನ್ನು ಒರೆಸಿಕೊಳ್ಳುವ ಮೂಲಕ ತನಿಖಾಧಿಕಾರಿಯವರಿಗೆ ಸೂಚನೆ ನೀಡಬೇಕು ಎಂದೂ ಸಹ ತಿಳಿಸಿದ್ದರು.

7. ನಂತರ ದೂರುದಾರಳಿಗೆ ತನಿಖಾಧಿಕಾರಿಯವರು ಒಂದು ವಾಯ್ಸ ರೆಕಾರ್ಡರ್ ನೀಡಿ ಅದನ್ನು ಹೇಗೆ ಉಪಯೋಗಿಸಬೇಕು ಎನ್ನುವುದನ್ನು ತಿಳಿಸಿಕೊಟ್ಟರು.

8. ಮೇಲ್ಕಂಡ ಎಲ್ಲಾ ಪ್ರಕ್ರಿಯಗಳ ಬಾಬ್ತು ಒಂದು ಮಹಜರ್ ನ್ನು ಟೈಪ್ ಮಾಡಿ ನಮ್ಮ ಸಹಿಗಳನ್ನು ಪಡೆದುಕೊಂಡರು. ಸದರಿ ಪ್ರಾಯೋಗಿಕ ಪಂಚನಾಮೆಯನ್ನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಪ್ರಾಯೋಗಿಕ ಪಂಚನಾಮೆಯನ್ನು ನಿಪಿ 2 ಎಂದು ಈಗಾಗಲೇ ಗುರುತುಪಡಿಸಿಕೊಳ್ಳಲಾಗಿದ್ದು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 2 ಸಿ ಎಂದು ಗುರುತುಪಡಿಸಿಕೊಳ್ಳಲಾಯಿತು.

9. ಅದೇ ದಿನ ಮಧ್ಯಾಹ್ಣ 02.45 ಕ್ಕೆ ಎರಡು ಇಲಾಖಾ ವಾಹನಗಳಲ್ಲಿ ತನಿಖಾಧಿಕಾರಿಯವರು ಫಿರ್ಯಾದುದಾರರು ಮತ್ತು ನಾವೆಲ್ಲರೂ ಹಾಗೂ ಎಸಿಬಿ ಸಿಬ್ಬಂದಿ ದೂರುದಾರಳ ಮನೆಯ ಹತ್ತಿರಕ್ಕೆ ಹೋಗಿ ವಾಹನಗಳನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿದೆವು. ಅಲ್ಲಿ ದೂರುದಾರಳು ಆರೋಪಿಗೆ ಫೋನ್ ಮಾಡಿದಾಗ , ಆತ ತಾನು ಹೊರಗಿದ್ದೇನೆ ಎಂದು ತಿಳಿಸಿ ಮರು ದಿನ ಬೆಳಿಗ್ಗೆ ಕಛೇರಿಗೆ ಬರಲು ತಿಳಿಸಿರುತ್ತಾರೆ ಎಂದು ದೂರುದಾರಳು

ತನಿಖಾಧಿಕಾರಿಯವರಲ್ಲಿ ತಿಳಿಸಿದರು. ನಂತರ ನಾವೆಲ್ಲರು ವಾಪಾಸ್ಸು ಎಸಿಬಿ ಕಛೇರಿಗೆ ಬಂದೆವು. ಅಲ್ಲಿ ದೂರುದಾರರು ಪರ್ಸಿನಲ್ಲಿದ್ದ ಹಣವನ್ನು ಕಛೇರಿಯ ಬೀರುವಿನಲ್ಲಿ ಇಟ್ಟರು. ಚಾ,ಸಾ. 2 ರವರ ಬಳಿಯಲ್ಲಿದ್ದ ನೋಟಿನ ವಿವರದ ಹಾಳೆಯನ್ನು ತನಿಖಾಧಿಕಾರಿಯವರು ಪಡೆದು ಇಟ್ಟುಕೊಂಡರು. ನಂತರ ದೂರುದಾರರ ಬಳಿಯಲ್ಲಿ ಇದ್ದ ವಾಯ್ಸ್ ರೆಕಾರ್ಡರ್ ನಲ್ಲಿ ರೆಕಾರ್ಡ ಆಗಿದ್ದ ಸಂಭಾಷಣೆಯನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ಎರಡು ಸಿಡಿ ಗಳಿಗೆ ವರ್ಗಾಯಿಸಿದರು. ನಂತರ ಅಲ್ಲಿ ಒಂದು ಮಹಜರ್ ಮಾಡಿ ಅದರಲ್ಲಿ ಆ ಸಂಭಾಷಣೆಯನ್ನೂ ಸಹ ಅಳವಡಿಸಿ, ನಮ್ಮ ಸಹಿಗಳನ್ನು ಪಡೆದರು. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ಈಗಾಗಲೇ ನಿಪಿ 10 ಎಂದು ಗುರುತುಪಡಿಸಿಕೊಳ್ಳಲಾಗಿದ್ದು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 10 ಸಿ ಎಂದು ಗುರುತುಪಡಿಸಿಕೊಳ್ಳಲಾಯಿತು.

10. ತನಿಖಾಧಿಕಾರಿಯವರು ನಮ್ಮಲ್ಲಿ ಈ ವಿಷಯವನ್ನು ಗೌಪ್ಯವಾಗಿ ಇಡಬೇಕು ಎಂದು ತಿಳಿಸಿ ಮರು ದಿನ ಬೆಳಿಗ್ಗೆ ಬರಲು ಹೇಳಿದರು.

11. ಮರು ದಿನ ಬೆಳಿಗ್ಗೆ 09.30 ರ ಸಮಯಕ್ಕೆ ನಾನು ಮತ್ತು ಚಾ,ಸಾ. 2 ಎಸಿಬಿ ಕಛೇರಿಗೆ ಹೋದೆವು. ದೂರುದಾರರು ಬೆಳಿಗ್ಗೆ 10.00 ಗಂಟೆಯ ಸಮಯಕ್ಕೆ ಆ ಕಛೇರಿಗೆ ಬಂದರು. ತನಿಖಾಧಿಕಾರಿಯವರು ಬೀರುವಿನಲ್ಲಿ ಇದ್ದಂತಹ ಹಣವನ್ನು ಪುನಃ ಚಾ,ಸಾ. 2 ರವರ ಕೈಗೆ ನೀಡಿ , ಈಗಾಗಲೇ ಬಿಳಿಯ ಹಾಳೆಯ ಮೇಲೆ ಬರೆದಿದ್ದ ನೋಟುಗಳ ಕ್ರಮ ಸಂಖ್ಯೆ ಮತ್ತು ಮುಖ ಬೆಲೆಯನ್ನು ಪರಿಶೀಲಿಸಿಕೊಳ್ಳಲು ಹೇಳಿದರು. ಅದರಂತೆ ನಾವು ಮಾಡಿದೆವು. ತನಿಖಾಧಿಾಕರಿಯವರು ವಾಯ್ಸ್ ರೆಕಾರ್ಡರ್ ನ್ನು ಪುನಃ ದೂರುದಾರಳಿಗೆ

ನೀಡಿ ಅದನ್ನು ಹೇಗೆ ಉಪಯೋಗಿಸಬೇಕು ಎಂದು ಪನಃ ತಿಳಿಸಿದರು. ನಂತರ ನಾವೆಲ್ಲರು ಹೋಗಿ ಕೈಗಳನ್ನು ತೊಳೆದುಕೊಂಡೆವು. ಚಾ,ಸಾ. 2 ರವರು ಆ ಹಣವನ್ನು ದೂರುದಾರರ ಪರ್ಸಿನಲ್ಲಿ ಇಟ್ಟರು.

12. ನಂತರ ಎರಡು ಇಲಾಖಾ ವಾಹನಗಳಲ್ಲಿ ನಾವೆಲ್ಲರು ಪುನಃ ಸಿದ್ದಲಿಂಗಪುರ ಗ್ರಾಮ ಪಂಚಾಯ್ತಿಯ ಕಡೆಗೆ ಹೋದೆವು. ಅಲ್ಲಿ ಗ್ರಾಮ ಪಂಚಾಯ್ತಿ ಕಛೇರಿಯಿಂದ ಸ್ವಲ್ಪ ದೂರದಲ್ಲಿ ವಾಹನಗಳನ್ನು ನಿಲ್ಲಿಸಿದೆವು. ತನಿಖಾಧಿಕಾರಿಯವರು ನನ್ನನ್ನು ಮತ್ತು ದೂರುದಾರರನ್ನು ಕಛೇರಿಯ ಒಳಗೆ ಹೋಗಲು ಹೇಳಿದರು. ನಾವಿಬ್ಬರು ಒಟ್ಟಿಗೆ ಕಛೇರಿಯ ಒಳಕ್ಕೆ ಹೋದೆವು. ಅಲ್ಲಿ ಒಬ್ಬ ವ್ಯಕ್ತಿ ದೂರುದಾರರನ್ನು ನೋಡಿ, ಆ ರೂಂನೊಳಗೆ ಹೋಗಿ ಎಂದು ಹೇಳಿದ. ಅದರಂತೆ ದೂರುದಾರರು ಅಲ್ಲಿ ಹೋಗಿ ಕುಳಿತರು. ನಂತರ ದೂರುದಾರರು ಪುನಃ ಆರೋಪಿ ಕುಳಿತಿದ್ದ ಜಾಗಕ್ಕೆ ಬಂದು ಮಾತನಾಡಲು ಪ್ರಾರಂಭಿಸಿದರು. ನಾನು ಅದೇ ರೂಂನಲ್ಲಿ ಅವರಿಬ್ಬರು ಕಾಣಿಸುವಷ್ಟು ಅಂತರದಲ್ಲಿ ನಿಂತಿದ್ದೆ. ಅವರಿಬ್ಬರ ನಡುವೆ ಮಾತುಕತೆ ನಡೆಯಿತು. ಆ ಮಾತುಕತೆ ನನಗೆ ಕೇಳಿಸಲಿಲ್ಲ. ಆರೋಪಿ ಕೈನಲ್ಲಿ ದೂರುದಾರಳಿಗೆ ಸನ್ನೆ ಮಾಡಿದರು. ಅದರಂತೆ ದೂರುದಾರರು ತಮ್ಮ ಬಲಗೈನಿಂದ ಹಣವನ್ನು ಆರೋಪಿಗೆ ಕೊಟ್ಟರು. ಆತ ಅದನ್ನು ಪಡೆದು ಎರಡೂ ಕೈಗಳಲ್ಲಿ ಎಣಿಸಿದರು ಮತ್ತು ತನ್ನ ಪ್ಯಾಂಟ್ ನ ಎಡ ಜೇಬಿನಲ್ಲಿ ಇರಿಸಿಕೂಂಡರು. ನಂತರ ದೂರುದಾರಳು ನನ್ನನ್ನೂ ಸಹ ಕರೆದುಕೊಂಡು ಹೊರಗೆ ಬಂದು ತಮ್ಮ ಸೀರೆಯ ಸೆರಗಿನಿಂದ ಮುಖ ಒರೆಸಿಕೂಳ್ಳುವ ಮೂಲಕ ಎಸಿಬಿ ತನಿಖಾಧಿಕಾರಿ ಮತ್ತು ಸಿಬ್ಬಂದಿಯವರಿಗೆ ಸೂಚನೆಯನ್ನು ನೀಡಿದರು. ತನಿಖಾಧಿಕಾರಿಯವರು ಆ ಕಛೇರಿಯ ಒಳಕ್ಕೆ ಬಂದಾಗ , ದೂರುದಾರಳು ಅಲ್ಲಿ ಕುಳಿತಿದ್ದ

ಆರೋಪಿಯನ್ನು ತೋರಿಸಿ ಇವರೇ ನನ್ನಿಂದ ಲಂಚದ ಹಣವನ್ನು ಪಡೆದವರು ಎಂದು ತಿಳಿಸಿದರು. ನಂತರ ಇನ್ಸ್ ಪೆಕ್ಟರ್ ರವರು ತಮ್ಮ ಐಡಿ ಕಾರ್ಡ ನ್ನು ತೋರಿಸಿ ಆರೋಪಿಗೆ ಪರಿಚಯಿಸಿಕೊಂಡರು. ನಂತರ ಇಬ್ಬರು ಎಸಿಬಿ ಸಿಬ್ಬಂದಿಗಳು ಆರೋಪಿಯ ಕೈಗಳನ್ನು ಹಿಡಿದುಕೂಂಡರು. ಒಬ್ಬ ಸಿಬ್ಬಂದಿ ಅಲ್ಲಿಗೆ ತಂದಿದ್ದ ಸೂಟ್ ಕೇಸ್ ನಲ್ಲಿ ಇದ್ದಂತಹ ಪದಾರ್ಥಗಳನ್ನು ಹೊರ ತೆಗೆದು ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿಕೊಂಡರು. ಮೊದಲು ಆರೋಪಿಯ ಬಲಗೈನ ಬೆರಳುಗಳನ್ನು ಆ ದ್ರಾವಣದಲ್ಲಿ ಅದ್ದಿಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಗಾಜಿನ ಬಾಟಲಿನಲ್ಲಿ ಶೇಖರಿಸಿ ಮುಚ್ಚಳ ಮುಚ್ಚಿ ಬಟ್ಟೆ ಕಟ್ಟಿ , ಸೀಲು ಮಾಡಿ , ಒಂದು ಚೀಟಿಯನ್ನು ಅಂಟಿಸಿ ನಮ್ಮೆಲ್ಲರ ಸಹಿಗಳನ್ನು ಪಡೆದರು. ಈಗ ಸದರಿ ಗುಲಾಟಿ ಬಣ್ಣ ದ್ರಾವಣವಿರುವ ಗಾಜಿನ ಬಾಟಲನ್ನು ನೋಡುತ್ತಿದ್ದೇನೆ. ಅದರ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ಈಗಾಗಲೇ ಎಂ ಒ 4 ಎಂದು ಗುರುತುಪಡಿಸಿಕೊಳ್ಳಲಾಗಿದೆ.

13. ನಂತರ ಆರೋಪಿಯ ಎಡಗೈನ ಬೆರಳುಗಳನ್ನು ಆ ದ್ರಾವಣದಲ್ಲಿ ಅದ್ದಿಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಗಾಜಿನ ಬಾಟಲಿನಲ್ಲಿ ಶೇಖರಿಸಿ ಮುಚ್ಚಳ ಮುಚ್ಚಿ ಬಟ್ಟೆ ಕಟ್ಟಿ , ಸೀಲು ಮಾಡಿ , ಒಂದು ಚೀಟಿಯನ್ನು ಅಂಟಿಸಿ ನಮ್ಮೆಲ್ಲರ ಸಹಿಗಳನ್ನು ಪಡೆದರು. ಈಗ ಸದರಿ ಗುಲಾಟಿ ಬಣ್ಣ ದ್ರಾವಣವಿರುವ ಗಾಜಿನ ಬಾಟಲನ್ನು ನೋಡುತ್ತಿದ್ದೇನೆ. ಅದರ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ಈಗಾಗಲೇ ಎಂ ಒ 5 ಎಂದು ಗುರುತುಪಡಿಸಿಕೊಳ್ಳಲಾಗಿದೆ.

14. ನಂತರ ಆರೋಪಿ ತನ್ನ ಪ್ಯಾಂಟ್ ಜೇಬಿನಲ್ಲಿ ಇದ್ದಂತಹ ಹಣವನ್ನು ತೆಗೆದು ಚಾ,ಸಾ. 2 ರವರ ಕೈಯಲ್ಲಿ ಕೊಟ್ಟರು. ತನಿಖಾಧಿಕಾರಿಯವರ ನಿರ್ದೇಶನದಂತೆ ನಾವುಗಳು ಈಗಾಗಲೇ ಒಂದು ಪ್ರತ್ಯೇಕ ಬಿಳಿಯ ಹಾಳೆಯಲ್ಲಿ ದಾಖಲಿಸಿಕೊಂಡಿದ್ದ ನೋಟುಗಳ ಮುಖ ಬೆಲೆ ಮತ್ತು ಸಂಖ್ಯೆಗಳೊಂದಿಗೆ ಸದರಿ ಬ ನೋಟುಗಳನ್ನು ಪುನಃ ಹೋಲಿಸಿ ನೋಡಿದಾಗ ಅವು ತಾಳೆಯಾದವು. ಸದರಿ ಹಣವನ್ನು ಅಮಾನತ್ತು ಪಡಿಸಿಕೂಂಡರು. ಆ ಹಣವನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

15. ನಂತರ ಆರೋಪಿಗೆ ಒಂದು ಪ್ರತ್ಯೇಕ ಪ್ಯಾಂಟ್ ನ ವ್ಯವಸ್ಥೆಯನ್ನು ಮಾಡಿ ಆತ ಧರಿಸಿದ್ದ ಪ್ಯಾಂಟ್ ನ್ನು ಪಡೆದು, ಆ ಪ್ಯಾಂಟ್ ಎನ ಎಡ ಜೇಬಿನ ಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಗಾಜಿನ ಬಾಟಲಿನಲ್ಲಿ ಶೇಖರಿಸಿ ಮುಚ್ಚಳ ಮುಚ್ಚಿ ಬಟ್ಟೆ ಕಟ್ಟಿ , ಸೀಲು ಮಾಡಿ , ಒಂದು ಚೀಟಿಯನ್ನು ಅಂಟಿಸಿ ನಮ್ಮೆಲ್ಲರ ಸಹಿಗಳನ್ನು ಪಡೆದರು. ಈಗ ಸದರಿ ಗುಲಾಟಿ ಬಣ್ಣ ದ್ರಾವಣವಿರುವ ಗಾಜಿನ ಬಾಟಲನ್ನು ನೋಡುತ್ತಿದ್ದೇನೆ. ಅದರ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ಈಗಾಗಲೇ ಎಂ ಒ 6 ಎಂದು ಗುರುತುಪಡಿಸಿಕೊಳ್ಳಲಾಗಿದೆ.

16. ಆರೋಪಿ ಆ ದಿನ ಧರಿಸಿದ್ದ ಪ್ಯಾಂಟ್ ನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಎಂ ಒ 7 ಎಂದು ಗುರುತುಪಡಿಸಿಕೊಳ್ಳಲಾಗಿದೆ.

17. ನಂತರ ತನಿಖಾಧಿಕಾರಿ ದೂರುದಾರರಿಂದ ವಾಯ್ಸ ರೆಕಾರ್ಡರ್ ನ್ನು ಪಡೆದು, ಅದರಲ್ಲಿ ದಾಖಲಾಗಿದ್ದ ಸಂಭಾಷಣೆಯನ್ನು ಅಲ್ಲಿ ಮಾಡಿದ ಮಹಜರ್ ನಲ್ಲಿ ಟೈಪ್

ಮಾಡಿಸಿ ಅಳವಡಿಸಿಕೊಂಡರು. ನಂತರ ದೂರುದಾರರು ಹಾಗೂ ಆರೋಪಿಯ ಮಾದರಿ ಧ್ವನಿಯನ್ನು ಪಡೆದುಕೊಂಡರು.

18. ನಂತರ ಆರೋಪಿ ತನ್ನ ಲಿಖಿತ ಸಮಜಾಯಿಶಿಯನ್ನು ನೀಡಿ, ಇದು ಲಂಚದ ಹಣವಲ್ಲ , ಕಂದಾಯದ ಹಣವನ್ನು ಸ್ವೀಕರಿಸಿರುತ್ತೇನೆ ಎಂದು ಬರೆದು ಕೊಟ್ಟರು. ಅದನ್ನು ದೂರುದಾರಳು ನಿರಾಕರಿಸಿದಳು.

19. ಮೇಲ್ಕಂಡ ಪ್ರಕ್ರಿಯಗಳು ನಡೆಯುತ್ತಿದ್ದ ಕಾಲಕ್ಕೆ ಫೋಟೋಗಳನ್ನು ತೆಗೆಯುತ್ತಿದ್ದರು. ಸದರಿ ಫೋಟೋಗಳನ್ನು ಈಗ ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ನಿಪಿ 11 ರಿಂದ 19 ಎಂದು ಗುರುತುಪಡಿಸಿಕೊಳ್ಳಲಾಗಿದೆ.

20. ದೂರುದಾರರಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಪಿಡಿಒ ರವರಿಂದ ದೃಢೀಕರಿಸಿಕೊಂಡು ಅಲ್ಲಿಯೇ ತನಿಖಾಧಿಕಾರಿ ಪಡೆದುಕೊಂಡರು.

21. ಮೇಲ್ಕಂಡ ಎಲ್ಲಾ ಪ್ರಕ್ರಿಯಗಳ ಬಾಬ್ತು ಮಹಜರ್ ಮಾಡಿ ನಮ್ಮಗಳ ಸಹಿಯನ್ನು ಪಡೆದುಕೊಂಡರು. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಮಹಜರ್ ನ್ನು ಈಗಾಗಲೇ ನಿಪಿ 20 ಎಂದು ಗುರುತುಪಡಿಸಿಕೊಳ್ಳಲಾಗಿದ್ದು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 20 ಸಿ ಎಂದು ಗುರುತುಪಡಿಸಿಕೊಳ್ಳಲಾಯಿತು.

22. ಟ್ರಾಪ್ ಆದ ನಂತರ ತನಿಖಾಧಿಕಾರಿಯವರು ಪಿಡಬ್ಲೂಡಿ ಕಛೇರಿಯಿಂದ ಒಬ್ಬ ಎಂಜಿನಿಯರ್ ರವರನ್ನು ಕರೆಯಿಸಿ ಆ ಸ್ಥಳದ ಕರಡು ನಕಾಶೆಯನ್ನು ತಯಾರಿಸಿಕೊಳ್ಳುವಂತೆ ಹೇಳಿದ್ದರು.

**Spl.C.No.143/20**
**P.W.-3**
**C.W.-3**

23. ಈ ಟ್ರಾಪ್ ಬಾಬ್ತು ನಾನು ಮರು ದಿನ ಎಸಿಬಿ ಕಛೇರಿಗೆ ಹೋಗಿ ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು , ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.